



ಪೋಷಕರೇ ನಿಮ್ಮ ಮಕ್ಕಳ ಮಾನಸಿಕ ಬೆಳವಣಿಗೆಯಲ್ಲಿ ಅಸಹಜತೆ ಕಂಡು ಬರುತ್ತಿದೆಯೇ? ನಿಮ್ಮ ಸಮಸ್ಯೆಗಳಿಗೆ ಆತಂಕಗಳಿಗೆ ಮನೋವಿಜ್ಞಾನಿ **ಡಾ.ಅ.ಶ್ರೀಧರ** ಅವರು ಉತ್ತರಿಸುತ್ತಾರೆ.

▸▸ ನನ್ನ ಮಗನಿಗೆ 12 ವರ್ಷ. ನಾವು ಕೃಷಿಕರು. ಪಿಯು ಮುಗಿಯುತ್ತಿದ್ದಂತೆಯೇ ನನಗೆ ಲಗ್ನ ಮಾಡಿದರು. ಓದುವ ಅಭ್ಯಾಸ ಬಿಟ್ಟಿಲ್ಲ. ದಿನಪತ್ರಿಕೆ, ವಾರಪತ್ರಿಕೆಗಳಲ್ಲಿ ಮಕ್ಕಳ ಬಗ್ಗೆ ಲೇಖನಗಳನ್ನು ತಪ್ಪದೇ ಓದುತ್ತೇನೆ. ಇದರಿಂದಾಗಿಯೇ ನನ್ನ ಮಗನಿಗೆ ಕಲಿಯುವ ಸಮಸ್ಯೆ ಇದೆ ಎನ್ನುವುದು ತಿಳಿದಿದೆ. ಅವನು ಬುದ್ಧಿವಂತ ಎನ್ನುವುದು ನನಗೆ ಗೊತ್ತು. ಶಾಲೆಯವರಿಗೆ ಮಾತ್ರ ಇದು ಅರ್ಥವಾಗಿರಲಿಲ್ಲ. ಕಳೆದ ಐದಾರು ವರ್ಷಗಳಲ್ಲಿ ನಾಲ್ಕೈದು ಶಾಲೆಗಳನ್ನು ಬದಲಾಯಿಸಿದ್ದೇವೆ. ಒಂದನೇ ತರಗತಿಯಲ್ಲಿ 'ಅವನ ಸ್ವಭಾವ ಸರಿ ಇಲ್ಲ, ಬೇರೆ ಶಾಲೆಗೆ ವರ್ಗಾಯಿಸಿ' ಎನ್ನುವ ಮೂಲಕವೇ ಅವನ ಶಿಕ್ಷಣ ಆರಂಭವಾಗಿದ್ದು. ಅವನು ದಡ್ಡ, ಕಲಿಸಲು ಸಾಧ್ಯವಿಲ್ಲವೆನ್ನುವ ಮಾತು ಕೇಳಿಸಿಕೊಂಡೇ ಇದುವರೆವಿಗೂ ಕಾಲಹರಣ ಮಾಡಿದೆವು. ಅವನಿಗೆ ಕಲಿಕೆಯ ದೋಷವಿದೆ ಎನ್ನುವುದು ಖಚಿತವಾಗಿ ಗೊತ್ತಾಗಿದ್ದು ಕಳೆದ ವರ್ಷ. ಅವನಿಗೆ ಜೋಡಿ ಅಂಕಿಗಳನ್ನು ಬರೆಯುವುದು ಕಷ್ಟ. ಬಾಯಲ್ಲಿ ಹೇಳುತ್ತಾನೆ, ಆದರೆ ಸರಿಯಾಗಿ ಬರೆಯಲಾರ. ಹಾಗೆಯೇ ಇಂಗ್ಲಿಷ್ ಅಕ್ಷರಗಳಲ್ಲಿ ಕೆಲವನ್ನು ತಿರುಗ ಮುರುಗ ಬರೆಯುತ್ತಾನೆ. ಕಾಗುಣಿತ ಅವನಿಗೆ ಬರದು. ಅದಕ್ಕಾಗಿ ತುಂಬ ಶಿಕ್ಷೆ ಕೊಟ್ಟಿದ್ದೇವೆ. ಶಾಲೆಯಲ್ಲಂತೂ ಅವನು ಅನುಭವಿಸಿದ ಕಷ್ಟ ಅಷ್ಟಿಷ್ಟಲ್ಲ. ಅವನ ಸಂಕಟ ಮತ್ತು ನಮ್ಮ ಅಜ್ಞಾನವನ್ನು ತಿಳಿಸಿಕೊಟ್ಟ ಪುಣ್ಯಾತ್ಮರೊಬ್ಬರು ವಿಶೇಷ ಶಾಲೆಯೊಂದಕ್ಕೆ ಸೇರಿಸುವಂತೆ ಸಲಹೆ ಕೊಟ್ಟರು. ಈಗ ನಮ್ಮ ಹುಡುಗ ಆ ಶಾಲೆಯಲ್ಲಿ ಕಲಿಯುವ ಪ್ರಯತ್ನ ಮಾಡ್ತಾ ಇದ್ದಾನೆ. ಅವನ ವಯಸ್ಸಿನ ಮಕ್ಕಳ ಜೊತೆ ಕಷ್ಟಪಟ್ಟು ಹೊಂದಿಕೊಳ್ಳುತ್ತಿದ್ದಾನೆ. ಆದರೆ, ಇದುವರೆವಿಗೂ ಅನುಭವಿಸಿರುವ ಆಘಾತದ ಪರಿಣಾಮವೋ ಏನೋ ಆಗಾಗ್ಗೆ ಅತಿಯಾದ ನಿರಾಸಕ್ತಿ, ಮೊಂಡುತನ ತೋರಿಸುತ್ತಾನೆ. ಆದರೆ, ಶಾಲೆಗೆ ಹೋಗುವುದನ್ನು ತಪ್ಪಿಸಲ್ಲ, ಟಿವಿ ನೋಡುವುದು, ಹಾಡುವುದು, ಆಟದಲ್ಲಿ ಭಾಗವಹಿಸುವುದು ಎಲ್ಲಾ ಸರಿಯಾಗಿದೆ. ನೋಡಲು ಅಂದವಾಗಿ, ಆರೋಗ್ಯವಾಗಿದ್ದಾನೆ. ಹೇಳಿದ್ದೆಲ್ಲ ಅರ್ಥಮಾಡಿಕೊಳ್ಳುತ್ತಾನೆ. ಸಣ್ಣ ಮಕ್ಕಳೆಂದರೆ ಪ್ರಾಣ. ಓದುವುದು, ಬರೆಯುವುದು ಎಂದರೆ ಅವನಿಂದಾಗದು. ಹೇಗಾದರೂ ಸರಿಯೇ ಅವನಿಗೆ ಕಲಿಸಲೇಬೇಕೆಂಬ ಛಲ ನನ್ನದು. ಅವನಿಗೆ ಕಲಿಸಿಕೊಡುವುದು ಅಷ್ಟೊಂದು ಸುಲಭವಲ್ಲ ಎನ್ನುವುದು ತಿಳಿದಿದೆ. ದಯಮಾಡಿ ಈ ವಿಷಯದ ಬಗ್ಗೆ ತಿಳುವಳಿಕೆ ನೀಡಿ ಎಂದು ವಿನಂತಿಸುತ್ತೇನೆ.

–ವಿಜಯಕುಮಾರಿ, ತುಮಕೂರು

ನಿಮ್ಮ ಮಗನಿಗೆ ಕಲಿಯುವದಕ್ಕೆ ಅಗತ್ಯವಿರುವ ಮಾನಸಿಕ ಶಕ್ತಿ ಕಡಿಮೆ ಇದೆ ಎನ್ನುವುದು ನಿಮಗೆ ಗೊತ್ತಾಗಿದೆ. ಅವನಿಗೆ ತಿಳುವಳಿಕೆ ನೀಡಲು ಸಾಧ್ಯ ಎನ್ನುವ ನಿಮ್ಮ ಅಭಿಪ್ರಾಯ ಸರಿಯಾದುದೇ. ನಿಮ್ಮ ಪ್ರಯತ್ನದ ಮೊದಲ ಹಂತದಲ್ಲಿ ಅವನಿಗೆ ಕಲಿಯುವ ಸಮಸ್ಯೆ ಇದೆ ಎನ್ನುವುದನ್ನು ಅರ್ಥ ಮಾಡಿಸಬೇಕು. ಅಂಕಿಗಳನ್ನು ತಿರುಗುಮುರಗ ಬರೆಯುವುದು ಉದ್ದೇಶಪೂರಕ ಅಥವಾ ತುಂಟಾಟಿಕೆಯಿಂದ ಅಲ್ಲ ಎನ್ನುವ ವಿಷಯ ಅವನಿಗೂ ತಿಳಿಯಬೇಕು. ಹೀಗೆ ಮಾಡುವುದರಿಂದ ಅವನಲ್ಲಿ ಆತ್ಮವಿಶ್ವಾಸ ಹೆಚ್ಚಬಲ್ಲದು. ಅವನ ಇತರ ಸಾಮರ್ಥ್ಯಗಳು ಓದು ಬರೆಹ ಉಂಟುಮಾಡಿರುವ ಮಿತಿಯನ್ನು ನೀಗಿಸುವುದಕ್ಕೆ ನೆರವಾಗಬಲ್ಲದು. ಜೊತೆಗೆ ಅವನಿಗೆ ಕೈಕಸುಬು, ನಟನೆ, ಸಂಗೀತ, ಕುಶಲಕಲೆಗಳ ಬಗ್ಗೆ ಮಾಹಿತಿ ಒದಗಿಸಿಕೊಟ್ಟಷ್ಟು ಒಳ್ಳೆಯದು. ಕಂಪ್ಯೂಟರ್ ಮೂಲಕವೂ ಕೆಲ ವಿಷಯಗಳತ್ತ ಆಸಕ್ತಿ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ. ಇಂತಹ ಮಕ್ಕಳ ಸಾಮರ್ಥ್ಯವನ್ನು ಹೆಚ್ಚಿಸುವ ಶಿಬಿರ, ತರಬೇತಿ ಕಾರ್ಯಾಗಾರಗಳು ನಡೆಯುತ್ತಲೇ ಇರುತ್ತವೆ, ಈ ಬಗ್ಗೆ ಮಾಹಿತಿ ಪಡೆದುಕೊಳ್ಳಿ. ನಿಮ್ಮ ಮಗನಿಗೆ ಕಲಿಯಲು ಕಷ್ಟವಾಗಿರುವ ವಿಷಯಗಳನ್ನು ಗುರುತಿಸಿ ಅವುಗಳನ್ನು ಸರಳವಾಗಿ ತಿಳಿಸುವ ಪ್ರಯತ್ನ ಮಾಡಿ. ದಪ್ಪ ಅಕ್ಷರಗಳನ್ನು ಬರೆಯಿಸುವುದು, ಗುರುತಿಸಿ ಓದುವಂತಹ ಪ್ರಯತ್ನ ಮಾಡಬಹುದು. ಕನ್ನಡಿ ಬಿಂಬದ ಮೂಲಕ ಎಡ– ಬಲದ ಗೊಂದಲಗಳನ್ನು ನಿವಾರಿಸಲು ಸಾಧ್ಯವಾಗಬಹುದು ಪ್ರಯತ್ನಿಸಿ. ಕೊನೆಗೊಂದು ಮಾತು, ಯಾವುದೇ ಕಾರಣಕ್ಕೂ ಅವನ ಮನಸ್ಸಿಗೆ ಘಾಸಿಯಾಗುವಂತಹ ಶಿಕ್ಷೆ ಕೊಡುವುದು ಬೇಡ. ಸಂಯಮ, ಸಾವಧಾನದಿಂದಲೇ ಅವನಿಗೆ ಕಲಿಯುವ ಹಂಬಲ ಮತ್ತು ವಿಶ್ವಾಸ ತುಂಬಿಸಬೇಕು.

▸▸ ನನಗೆ 30 ವರ್ಷ, ನನ್ನ ಗಂಡನಿಗೆ 43. ಮದುವೆಯಾಗಿ ಹದಿಮೂರು ವರ್ಷಗಳಾಗಿವೆ. 11 ಮತ್ತು 9 ವರ್ಷದ ಇಬ್ಬರು ಗಂಡುಮಕ್ಕಳಿದ್ದಾರೆ. ನಾವಿಬ್ಬರೂ ಪ್ರೀತಿಸಿ ಮದುವೆಯಾಗಿದ್ದು. ಮದುವೆಯಾದಾಗ ಮನೆಯಿಂದ ತುಂಬ ವಿರೋಧವಿತ್ತು. ಕೆಲವರ್ಷ ಸುಖವಾಗಿ ಸಂಸಾರ ನಡೆಸಿದೆವು. ಕಳೆದ ನಾಲ್ಕೈದು ವರ್ಷಗಳಿಂದ ನಮ್ಮ ಮನೆಯವರು ನನ್ನ ಬಗ್ಗೆಯಾಗಲಿ, ಮಕ್ಕಳ ಬಗ್ಗೆಯಾಗಲಿ ಯಾವ ರೀತಿಯ ಆಸಕ್ತಿಯನ್ನೂ ತೋರಿಸುತ್ತಿಲ್ಲ. ಮೊದಲೆಲ್ಲ ಅವರ ಮನೆಯವರನ್ನು ಕಂಡರೆ ಸಿಟ್ಟಾಗುತ್ತಿದ್ದರು. ಈಗ ಆ ಮನೆ ಮಂದಿಯೊಂದಿಗೆ ಹೆಚ್ಚಾಗಿ ಸಮಯ ಕಳೆಯುತ್ತಾರೆ. ಅಷ್ಟೇ ಅಲ್ಲ ಅವರ ಸಂಪಾದನೆಯ ಬಹುಪಾಲು ಆ ಮನೆಗೆ ಕೊಡುತ್ತಿದ್ದಾರೆ. ಈ ಬಗ್ಗೆ ಪ್ರಸ್ತಾಪ ಮಾಡಿದರೆ ದಿನಗಳಗಟ್ಟಲೆ ಮನೆಗೆ ಬರುವುದಿಲ್ಲ. ಇದರಿಂದ ಭಯಗೊಂಡಿರುವ ಮಕ್ಕಳು ಅವರು ಹೇಳಿದಂತೆ ನಡೆದುಕೊಳ್ಳುತ್ತಾರೆ. ಅವರ ವಿದ್ಯಾಭ್ಯಾಸದ ಕಡೆ ಕೊಂಚವೂ ಗಮನ ಹರಿಸುವುದಿಲ್ಲ. ಶಾಲೆಯಿಂದ ಸದಾ ದೂರು ಬರುತ್ತದೆ. ಈ ವಿಷಯವನ್ನು ನಮ್ಮ ಮನೆಯವರು ತಲೆಗೆ ಹಚ್ಚಿಕೊಳ್ಳುವುದಿಲ್ಲ. ಏನಾದರೂ ಕೇಳಿದರೆ ಮನೆಬಿಟ್ಟು ಹೋಗುವೆ ಎಂದು ಹೆದರಿಸುತ್ತಾರೆ. ಈಗ ನನಗೊಂದು ಪುಟ್ಟ ನೌಕರಿ ಸಿಕ್ಕಿದೆ. ನೌಕರಿ ಸೇರಿಕೊಂಡರೆ ಮಕ್ಕಳೊಂದಿಗೆ ಬೇರೆ ಮನೆಮಾಡಿಕೊಂಡಿರು ಎನ್ನುತ್ತಾರೆ. ಇಂತಹದೊಂದು ಸನ್ನಿವೇಶದಲ್ಲಿ ಏನು ಮಾಡಬೇಕೆಂಬುದೇ ತಿಳಿಯುತ್ತಿಲ್ಲ. ನನ್ನ ಮಕ್ಕಳಿಗೆ ತಂದೆಯ ಭಯ, ನನಗೆ ಅಕ್ಕಪಕ್ಕದವರ ಭಯ, ಜೊತೆಗೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಹಿನ್ನಡೆ ಇವೆಲ್ಲವುಗಳನ್ನು ಎದುರಿಸುವುದು ಹೇಗೆ? ನನ್ನ ದಾಂಪತ್ಯ ಗಟ್ಟಿಯಾಗಿರಲಿ ಎನ್ನುವ ಪ್ರಯತ್ನ ನನ್ನ ಕಡೆಯಿಂದಷ್ಟೇ ಆಗುತ್ತಿದೆ. ಇಂತಹ ಸ್ಥಿತಿಯಲ್ಲಿ ನನ್ನ ಮಕ್ಕಳ ಭವಿಷ್ಯದತ್ತ ಗಮನ ಹರಿಸುವುದು ಹೇಗೆ ಎನ್ನುವುದು ತಿಳಿಯುತ್ತಿಲ್ಲ, ದಯಮಾಡಿ ಸಲಹೆ ನೀಡಿ.

–ರಜನಿ, ಕನಕಪುರ

ಊರವರ ಮಾತು, ಅನಿಸಿಕೆಗಳತ್ತ ಸದ್ಯ ಗಮನ ಹರಿಸುವುದು ಬೇಡ. ನಿಮಗೆ ಸಿಕ್ಕಿರುವ ನೌಕರಿ ಮನಸ್ಸಿಗೆ ಹಿಡಿಸುವಂತಹದ್ದಾಗಿದ್ದರೆ ಒಪ್ಪಿಕೊಳ್ಳಿ. ಇದರಿಂದ ನಿಮ್ಮ ಆರ್ಥಿಕ ಅವಲಂಬನೆ ಸ್ವಲ್ಪ ಕಡಿಮೆಯಾಗಬಹುದು. ಜೊತೆಗೆ ನಿಮ್ಮನ್ನು ಕಾಡುತ್ತಿರುವ ಕೆಲ ಆತಂಕಗಳು ದೂರವಾಗಬಹುದು. ಆತಂಕಗಳು ದೂರವಿದ್ದಾಗ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಪರಿಹಾರದ ಮಾರ್ಗ ಹೊಳೆಯಬಹುದು. ನಿಮ್ಮ ದಾಂಪತ್ಯದಲ್ಲಿ ಕಾಣಿಸಿಕೊಂಡಿರುವ ಸಮಸ್ಯೆಗಳಿಂದ ನಿಮ್ಮ ಮತ್ತು ಮಕ್ಕಳ ಸಾಮಾಜಿಕ, ಮಾನಸಿಕ, ಆರ್ಥಿಕ ಬೆಳವಣಿಗೆಯ ಮೇಲೆ ಆಗುವಂತಹ ಕೆಟ್ಟ ಪರಿಣಾಮಗಳೇನು ಎನ್ನುವುದರ ಅರಿವು ನಿಮ್ಮ ಗಂಡನಲ್ಲಿ ಮೂಡಿಸುವ ಕೆಲಸ ನಂತರದಲ್ಲಿ ಆಗಬೇಕು. ಇದಾಗಲು ನಿಮ್ಮ ಅತ್ತೆಯ ಮನೆಯವರೊಂದಿಗೆ ಮಾತನಾಡುವುದು ಬಹಳ ಮುಖ್ಯ. ಇದು ನಿಮ್ಮಿಂದ ಸಾಧ್ಯವಾಗದಿದ್ದಲ್ಲಿ ನಿಮ್ಮ/ ಅವರ ಹಿತೈಷಿಗಳ ಮೂಲಕ ಪ್ರಯತ್ನ ಮಾಡಿ. ಹಾಗೆಯೇ ಅವರ ಗೆಳೆಯರು ಅಥವಾ ಕೆಲಸ ಮಾಡುವ ಜಾಗದಲ್ಲಿ ಅವರು ಗೌರವಿಸುವ ವ್ಯಕ್ತಿಯೊಂದಿಗೆ ನಿಮ್ಮ ದಾಂಪತ್ಯದ ಬಗ್ಗೆ ಮಾತಾಡುವುದರಲ್ಲಿ ತಪ್ಪಿಲ್ಲ. ಇದಾವುದಕ್ಕೂ ಅವರು ಮಣಿಯದಿದ್ದ ಪಕ್ಷದಲ್ಲಿ ನಿಮ್ಮ ಮಕ್ಕಳ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಯ ದೃಷ್ಟಿಯಿಂದ ವಸತಿಶಾಲೆಗೆ ಸೇರಿಸುವುದರ ಬಗ್ಗೆ ಆಲೋಚಿಸಿ ನೋಡಿ. ಕಾನೂನಿನ ಮೂಲಕ ಸಮಸ್ಯೆ ಪರಿಹಾರವಾಗಬಲ್ಲದು ಎನ್ನುವ ವಿಶ್ವಾಸ ನಿಮ್ಮಿಬ್ಬರಲ್ಲೂ ಇದ್ದರೆ ಅದರ ಬಗ್ಗೆಯೂ ಆಲೋಚಿಸಬಹುದು.

**ನಿಮ್ಮ ಪ್ರಶ್ನೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕರು, 'ಸುಧಾ', 'ನನ್ನ ಮಗು ಹೀಗೇಕೆ?' ವಿಭಾಗ, 75, ಎಂಜಿ. ರಸ್ತೆ, ಬೆಂಗಳೂರು-560001, ಮೊಬೈಲ್ 9880937122**